ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

ಸಂಖ್ಯೆ: ವಾತೆಅಆ(ಗು&ಸ)/ಉಆ/A2/ಸಿಆರ್-195/15-16.
T.No.1080/15-16

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ,
ಗಾಂಧಿನಗರ, ಬೆಂಗಳೂರು,
ದಿನಾಂಕ: 24/03/2016.

## ಅಧಿಸೂಚನೆ

**ವಿಷಯ:-** ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾರಿ), ಪಶ್ಚಿಮ ವಲಯ, ಮಂಗಳೂರು, ವಿಭಾಗದ ಶಿರೂರಿನಲ್ಲಿ ಒಂದು ತನಿಖಾ ಠಾಣೆಯನ್ನು ಸ್ಥಾಪಿಸುವ ಬಗ್ಗೆ.

**ಉಲ್ಲೇಖ:-** 1. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾರಿ), ಪಶ್ಚಿಮ ವಲಯ, ಮಂಗಳೂರು, ಇವರ ಪತ್ರ ಸಂಖ್ಯೆ: ವಾತೆಜಂಆ(ಜಾರಿ)/ಪ.ವ./ತ.ಬಿಂ./15-16, ದಿನಾಂಕ: 29/02/2016.

<><><>

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾರಿ), ಪಶ್ಚಿಮ ವಲಯ, ಮಂಗಳೂರು, ವಿಭಾಗಕ್ಕೆ ಸಂಬಂಧಿಸಿದಂತೆ ಮಂಗಳೂರು-ಗೋವಾ ರಾಷ್ಟ್ರೀಯ ಹೆದ್ದಾರಿ 66 ರಲ್ಲಿರುವ ಶಿರೂರು, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಇಲ್ಲಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ 2003ರ ಕಲಂ 53ರ ಅಡಿಯಲ್ಲಿ ನೀಡಿರುವ ಅಧಿಕಾರ ವ್ಯಾಪ್ತಿಯಲ್ಲಿ ಸಂಶಯಾಸ್ಪದ ಸರಕು ವಾಹನಗಳನ್ನು ತಪಾಸಿಸಿ ಕಾಯ್ದೆಯನ್ನು ಉಲ್ಲಂಘಿಸಿದ ಸರಕು ವಾಹನಗಳನ್ನು ಸುರಕ್ಷಿತವಾಗಿ ನಿಲ್ಲಿಸಿ ಭೌತಿಕ ತಪಾಸಣೆ ಮಾಡಲು ಹಾಗೂ ಇತರೆ ಪೂರಕ ಕಾರ್ಯಗಳನ್ನು ಕೈಗೊಂಡು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ 2003ರ ಕಾಯ್ದೆಯಡಿ ರಾಜ್ಯಸ್ವ ಸಂಗ್ರಹಣೆ ಮಾಡುವ ಹಿತ ದೃಷ್ಟಿಯಿಂದ ಶಿರೂರಿನಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತಿದ್ದ ತನಿಖಾ ಠಾಣೆಯ ಸ್ಥಳದಲ್ಲಿ ಮೇಲ್ಕಂಡ ಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಸದರಿ ಸ್ಥಳವನ್ನು ಕರ್ನಾಟಕ ಮೌಲ್ಯವರ್ದಿತ ತೆರಿಗೆ ಕಾಯ್ದೆ 2003ರ ಕಲಂ 53 ರಂತೆ ತನಿಖಾ ಠಾಣೆಯೆಂದು ಘೋಷಿಸಬೇಕೆಂದು ಉಲ್ಲೇಖ(1)ರ ಪತ್ರದಲ್ಲಿ ಜಂಟಿ ಆಯುಕ್ತರು ಕೋರಿರುತ್ತಾರೆ.

2. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾರಿ), ಪಶ್ಚಿಮ ವಲಯ, ಮಂಗಳೂರು, ಇವರ ಪ್ರಸ್ತಾವನೆಯನ್ನು ಪರಶೀಲಿಸಲಾಗಿ, ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುವ ಸಂಶಯಾಸ್ಪದ ಸರಕು ವಾಹನಗಳನ್ನು ತಡೆದು ದಾಖಲಾತಿಗಳನ್ನು ಪರಿಶೀಲಿಸಲು ಮತ್ತು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯನ್ನು ಉಲ್ಲಂಘಿಸಿದ ಸರಕು

ಮು.ತಿ.ನೋ..

ವಾಹನಗಳನ್ನು ಸುರಕ್ಷಿತವಾಗಿ ನಿಲ್ಲಿಸಲು, ಭೌತಿಕ ತಪಾಸಣೆ ಮಾಡಲು, ಅಧಿಕಾರಿಗಳು ಮತ್ತು ನೌಕರರ ಪಾಳಿ ಬದಲಾವಣೆ, ಹಾಗೂ ಸಂಬಂಧಪಟ್ಟ ಅಧಿಕಾರಿಯವರಿಂದ ಬಿಡುಗಡೆ ಆದೇಶ ನೀಡುವವರೆಗೂ ಸದರಿ ಸರಕು ವಾಹನಗಳನ್ನು ನಿಲ್ಲಿಸಲು ಸರ್ವೆ ನಂ: 373/1ಬಿ, ಮಂಗಳೂರು ಗೋವಾ ರಾಷ್ಟ್ರೀಯ ಹೆದ್ದಾರಿ 66, ವಿಜಯ ಬ್ಯಾಂಕ್ ಹತ್ತಿರ, ಶಿರೂರು, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಈ ಸ್ಥಳವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ 2003ರ ಕಲಂ 53(1)ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಿತ್ವಿಕ್ ಪಾಂಡೆ, ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು, ಆದ ನಾನು, ಮಾರಾಟ ತೆರಿಗೆ ತನಿಖಾ ಠಾಣೆ ಎಂದು ಪರಿಗಣಿಸಿ ಕಾರ್ಯನಿರ್ವಹಿಸಲು ಅಧಿಸೂಚನೆ ಮೂಲಕ ಆದೇಶ ಹೊರಡಿಸುತ್ತಿದ್ದೇನೆ.

3. ಈ ಆದೇಶವು ದಿನಾಂಕ: 01-04-2016 ರಿಂದ ಜಾರಿಗೆ ಬರುತ್ತದೆ ಹಾಗೂ ಮುಂದಿನ ಆದೇಶದವರೆಗೂ ಜಾರಿಯಲ್ಲಿರುತ್ತದೆ.

(ರಿತ್ವಿಕ್ ಪಾಂಡೆ),
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ಪ್ರತಿಗಳನ್ನು:-

1) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)-1/(ಕೇಂದ್ರ ಕಛೇರಿ)-2/ಬೆಂಗಳೂರು, ಇವರಿಗೆ ಮಾಹಿತಿಗಾಗಿ.
2) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
3) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಪಶ್ಚಿಮ ವಲಯ, ಮಂಗಳೂರು, ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
4) ಇಲಾಖೆಯ ಎಲ್ಲಾ ಜಂಟಿ ಆಯುಕ್ತರವರು (ಆಡಳಿತ/ಜಾರಿ/ಜಾಗೃತಿ/ಮನವಿಗಳು), ಇವರಿಗೆ ಮಾಹಿತಿಗಾಗಿ.
5) ಇ-ಆಡಳಿತ ವಿಭಾಗಕ್ಕೆ ಇಲಾಖೆಯ ಜಾಲತಾಣ http://ctax.kar.nic.in ನಲ್ಲಿ ಮತ್ತು ವಿಸ್ತೃತ ಜಾಲತಾಣದಲ್ಲಿ (WAN) ವ್ಯಾನ್‌ನಲ್ಲಿ ಪ್ರಕಟಿಸಲು.
6) ಕಚೇರಿ ಪ್ರತಿ / ರಕ್ಷಾ ಕಡತ / ಆಯುಕ್ತರ ಆಪ್ತ ಶಾಖೆಗೆ.